341

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮೆ.

ತಾರೀಖು 24ನೇ ಆಗಸ್ಟ್ 1896.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಡಿಪೋಗಳಿಗೆ ಅನುಗಳ ಬುಜಾದಲ್ಲಿ ಕಾಣಿಸಿರುವ ಜಂಗಲಿನಿಂದ 1897ನೇ ಇಸವಿ ಮಾರ್ಚಿ ಆಖೈರ್ ವಳಗಾಗಿ ನಾಟು, ಬೆಲಗು, ಗಳ ಜವಾಯಿಸಿ ಕೊಡುವದಕ್ಕೆ ಟೆಂಡರ್ ಗಳು ಅಂಗೀಕರಿಸಲ್ಪಡುತ್ತವೆ:—

ನಂಬರ್.	ಡಿಪೋ ಹೆಸರು.	ಮರದ ಜಾತಿ.	ಮೊತ್ತ ಅದದು.	ಜಂಗಲ್ ಹೆಸರು.	ಸುಮಾರು ಫಾಸಲೆ ಮೈಲಿ	ಷರಾ.
1	ಶಿವಮೊಗ್ಗಾ ..	ಸಾಗುವಾನಿ ನಾಟು	100	ಭೂತನಬೈಲು	20	ಶಂಕರ ಫಾರೆಸ್ಟ್ ಡಿಪೋ
		ಜಂಗಲಿ ನಾಟು	200	ಕಟ್ಟೆಹಳ್ಳಿ, ಶಂಕರ	14	
		ಜಂಬೆ ನಾಟು	300	ಹಾರೋಹಿತ್ತಲು, ಸಾಗರವಳ್ಳಿ, ವಾರೇಕೊಪ್ಪ, ಅರನೇಲಿ ಮತ್ತು ಇತರ ಬಾಜು ಡಿಸ್ಟ್ರಿಕ್ಟು ಫಾರೆಸ್ಟ್ಗಳು	22	
		ಸಾಗುವಾನಿ ಬೆಲಗು	300	ಶೊಂವೇನಹಳ್ಳಿ ಮತ್ತು ಬಾಜು ಡಿಸ್ಟ್ರಿಕ್ಟು ಜಂಗಲ	13	
		ಜಂಗಲ್ ಬೆಲಗು	100	ಡಿಟೋ	13	
		ಕಿರಿ ಬಿದರು	12,000	ಶಂಕರ ಫಾರೆಸ್ಟ್	14	ಶಂಕರ ಫಾರೆಸ್ಟ್
2	ಆಯನೂರು ..	ಸಾಗುವಾನಿ ನಾಟು	100	ಮಿಸರೂರು ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟ್ಗಳು	12	ಮಿಸರೂರು ಫಾರೆಸ್ಟ್
		ಜಂಗಲ್ ನಾಟು	75	ವಾರೇಕೊಪ್ಪ, ಹಾರೋಹಿತ್ತಲು, ಸಾಗರವಳ್ಳಿ ಡಿಸ್ಟ್ರಿಕ್ಟು ಜಂಗಲ್ಗಳು	12	
		ಸಾಗುವಾನಿ ಬೆಲಗು	200	ಕುಂಸಿ	10	
		ಕಿರಿ ಬಿದರು	5,000	ಕೂಡಿ, ಮತ್ತಲ್ಲಿ, ಮತ್ತು ತಾವರೇ ಕೊಪ್ಪ	10	
3	ಚೆನ್ನಗಿರಿ ..	ಸಾಗುವಾನಿ ಬೆಲಗು	1,500	ಸಾರತಿ, ಹಗೇದಹಳ್ಳಿ, ಹಂಚಿಕ್ಯಾಪುರ ಮತ್ತು ಆಗರದಳ್ಳಿ ಡಿಸ್ಟ್ರಿಕ್ಟು ಜಂಗಲ್ಗಳು	11	
		ಕಿರಿ ಬಿದರು	50,000	ಭಂಡಿಗುದ್ದು, ಒಬನೆಹಾಳು ಮತ್ತು ನುಲೆಬಸಲಿ	15	
4	ವೆಬ್ಯಾಣಿ ..	ಸಾಗುವಾನಿ ಬೆಲಗು	1,000	ವೆಬ್ಯಾಣಿ ಬ್ಲಾಕು	8	ಕುಕ್ಕವಾಡಾ ವೆಬ್ಯಾಣಿ ಡಿಟೋ
		ಜಂಗಲಿ ಬೆಲಗು	500	ಕೆಂಗಾಡೇಣಿ,	8	
		ಕಿರಿ ಬಿದರು	50,000	ಕಾಗಹಳ್ಳ, ರಕ್ಷಿಹಾಳು	10	
5	ಕಣಬೂರು ..	ಸಾಗುವಾನಿ ನಾಟು	100	ಕಣಬೂರು, ಹಾಗಲಮನೆ, ಆರಂಬಳ್ಳಿ ಮತ್ತು ಅಜ್ಜಿಗುಡ್ಡಿ ಡಿಸ್ಟ್ರಿಕ್ಟು ಜಂಗಲ್	6	
		ಜಂಗಲ್ ನಾಟು	150	ಡಿಟೋ	6	
6	ಸಮುದ್ರಹಳ್ಳಿ ..	ಡಿಟೋ	150	ಚೋರನೆಡೆಹಳ್ಳೀ ಫಾರೆಸ್ಟ್	6	
7	ತೀರ್ಥಪುರ ..	ಸಾಗುವಾನಿ ನಾಟು	25	ಕರಡಿಪಟ್ಟು ಫಾರೆಸ್ಟ್	16	
		ಜಂಗಲ್ ನಾಟು	100			
		ಕಿರಿ ಬಿದರು	10,000	ಕರಡಿಪಟ್ಟು ಮತ್ತು ಗಂಗವನಸರ ಫಾರೆಸ್ಟ್ಗಳು	12ರ ಲಾ||	
		ಹೆಬ್ಬಿದರು	1,000	ಡಿಟೋ ಡಿಟೋ	15	
		ಸಾಗುವಾನಿ ಬೆಲಗು	300	ಗಂಗವನಸರ ಮತ್ತು ಬಾಜು ಡಿಸ್ಟ್ರಿಕ್ಟು ಫಾರೆಸ್ಟ್	12	
		ಜಂಗಲ್ ಬೆಲಗು	100	ಡಿಟೋ ಡಿಟೋ	12	

ನಂಬರ್.	ಡಿಪೋ ಹೆಸರು.	ಮರದ ಜಾತಿ.	ಪೊತ್ತ ಅದದು.	ಜಂಗಲ್ ಹೆಸರು.	ಸುಮಾರು ಫಾ ಸಲೆ ಮೈಲಿ.	ಷರಾ.
8	ಶಿರಾಳಕೊಪ್ಪ ..	ಜಂಗಲ್ ನಾಟೂ	75	ಬೆಳಂದೂರು ಫಾರೆಸ್ಟ್	14	
		ಡಿಪೋ ಬೆಲಗು	150			
		ಹೆಬ್ಬಿದರು	500			
		ಕಿರಿ ಬಿದರು	5,000	ಕರಡಿ ಪಟ್ಟ	22	
		ಸಾಗುವಾನಿ ಬೆಲಗು	100	ಕವಲಿ, ಬಸವನಂದಿಹಳ್ಳಿ ಮತ್ತು ತೊಗವಳ ಫಾರೆಸ್ಟ್ಗಳು	7	
9	ಆನವಟ್ಟಿ ..	ಸಾಗುವಾನಿ ನಾಟೂ	50	ತೆಲಗಡ್ಡಿ ಫಾರೆಸ್ಟ್	8	
		ಡಿಪೋ ಬೆಲಗು	200			
		ಜಂಗಲ್ ನಾಟೂ	75	ಜಟ್ಟಪ್ಪದ ಕುರ್ಲಿ	8	
		ಹೆಬ್ಬಿದರು	1,000			
		ಕಿರಿ ಬಿದರು	5,000			
10	ಚಿತ್ರದುರ್ಗ ..	ಸಾಗುವಾನಿ ನಾಟೂ	25	ಮುಸಕೂರು ಮತ್ತು ಬಾಜು ಡಿಪ್ಪು ಕ್ಕು ಫಾರೆಸ್ಟ್ಗಳು	90	
		ಜಂಗಲ್ ನಾಟೂ	50	ಕಟ್ಟಹಳ್ಳಿ, ಶಂಕರ	84	
		ಸಾಗುವಾನಿ ಬೆಲಗು	500	ನಾರತಿ, ಹಗೇದಹಳ್ಳಿ, ಹಂಚಿದ್ದಾಪುರ ಮತ್ತು ಆಗರದಹಳ್ಳಿ	49	
		ಕಿರಿ ಬಿದರು	12,000	ಭಂಡಿಗುಡ್ಡ, ಬದನೆಹಾಳು ನುಲಿ ಬಸಲಿ	53	
		ಹೆಬ್ಬಿದರು	300	ಡಿಟೋ	53	

2. ಎಲ್ಲಾ ಟೆಂಡರ್‌ಗಳ ಮೇಲೂ ಯಿಂಥಾ ಡಿಪ್ಪೋವಿಗೆ ನಾಟೂ, ಬೆಲಗುಗಳ ಜವಾಯಿಸುವ ಬಗ್ಗೆ ಟೆಂಡರ್ ಯಂದು ಬರಿಯತಕ್ಕದ್ದು. ಮತ್ತು ಟೆಂಡರ್ ಸಂಗಡ ಡಿಪ್ಪೋ 1ಕ್ಕೆ 100 ರೂಪಾಯಿನಂತೆ ಕರ್ನಸೀ ನೋಟ್ ಮೂಲಕ ಠೇವಣಿ ಹಾಜರ್ ಮಾಡತಕ್ಕದ್ದು, ತಿರಸ್ಕರಿಸಲ್ಪಟ್ಟ ಟೆಂಡರಿನ ಸಂಗಡ ಮೊಬಲಗು ವಾಪಸ್ ಮಾಡಲ್ಪಡುವದು.

3. ಟೆಂಡರ್‌ಗಳು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕ್ಯಸರ್‌ವೇಟರ ಹೆಸರನಲ್ಲಿ ಬರಿಯಕ್ಕದ್ದು. 1896ನೇ ಇಸವಿ ಸೆಪ್ಟಂಬರ್ ತಾರೀಖು 28ನೇ ದಿವಿ 12 ಘಂಟೆ ವರಿಗೂ ಸದರೀ ಟೆಂಡರ್‌ಗಳು ಅಂಗೀಕರಿಸಲ್ಪಡುವವು.

4. ಪ್ರತಿ ಬಬ್ಬ ದರಖಾಸ್ತುದಾರನೂ ಈ ಕೆಳಗೆ ನಮೂದಿಸುವ ತಪ್ಶೀಲಿನಂತೆ ನಾಟೂಗಳನ್ನು, ಕಡದು, ಕೆತ್ತಿ ಜವಾಯಿಸುವದಕ್ಕೆ ಸಲೆ ಅಡಿ 1ಕ್ಕೆ ಆಖೈರ್ ದರ ನಮೂದಿಸತಕ್ಕದ್ದು.

ನಾಟೂಗಳು.

(1) 12 ಸಲೆ ಅಡಿ ಮತ್ತು ಅದಕ್ಕೆ ವಳಪಟ್ಟದ್ದಕ್ಕೆ.
(2) 12 ಸಲೆ ಅಡಿ ಮೇಲ್ಪಟ್ಟು 20 ಸಲೆ ಅಡಿ ವರಿಗೆ.
(3) 20 ಸಲೆ ಅಡಿಗೆ ಮೇಲ್ಪಟ್ಟದ್ದಕ್ಕೆ.

ಬೆಲಗುಗಳು.

(1) 4 ಸಲೆ ಅಡಿ ವಳಪಟ್ಟದ್ದಕ್ಕೆ.
(2) 4 ಅಡಿಗೆ ಮೇಲ್ಪಟ್ಟು 8 ಅಡಿ ವರಿಗೆ ಯಿರುವದಕ್ಕೆ.
(3) 8 ಅಡಿಗೆ ಮೇಲ್ಪಟ್ಟದ್ದಕ್ಕೆ.

ಹೆಬ್ಬಿದರು ಯಾ ಕಿರಿ ಬಿದರು ಗಳ 100ಕ್ಕೆ.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಟೆಂಡರ್ ಅಂಗೀಕರಿಸಿದ ವರ್ತಮಾನವನ್ನು ತಿಳಿದ ವಂದು ವಾರದೊಳಿಗಾಗಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರೆದುಕೊಡಬೇಕಲ್ಲದೇ ತನ್ನ ಕಂಟ್ರಾಕ್ಟು ಸರಿಯಾಗಿ ಪೂರೈಸಕೊಡುವದಕ್ಕೆ ಖಾತ್ರಿಗಾಗಿ ಪುನಹ 150 ರೂಪಾಯಿ ಠೇವಣಿ ಯಿಡತಕ್ಕದ್ದು. ಕಂಟ್ರಾಕ್ಟಿನ ಷರತ್ತಿನಲ್ಲಿ ಯಾವದಕ್ಕಾದರೂ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಠೇರಿಸಿಕೊಳ್ಳಲ್ಪಡುವದು.

6. ಜಂಗೀ ಕಾಲದಲ್ಲಿ ಕಂಟ್ರಾಕ್ಟುದಾರನು ಡೆಪ್ಯುಟಿ ಕ್ಯಸರ್‌ವೇಟರ ಆಜ್ಞೆ ಅನುಸರಿಸಿ ನಡದುಕೊಳ್ಳಬೇಕು.

7. ಫಾರೆಸ್ಟ್ ಇಲಾಖೆಯವರು ನಿರ್ಣಯಮಾಡಿದ ಮರಗಳ ವಿನಹ ಬೇರೆ ಮರಗಳನ್ನ ಕಡಿಯಕೂಡದು, ಮತ್ತು ಡೆಪ್ಯುಟಿ ಕ್ಯಸರ್‌ವೇಟರ ಆಜ್ಞೆ ಮೇರಿಗೆ ನಾಟೂಗಳನ್ನು ಸರಿಯಾಗಿ ಕೆತ್ತಿಸಬೇಕು.

8. ಕಮ್ಮಿ ದರದ ಟೆಂಡರ್ ಆಗಲಿ ಯಾ ಮತ್ಯಾವ ಟೆಂಡರ್ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕ್ಯಸರ್‌ವೇಟರು ಸ್ವತಂತ್ರರಾಗಿ ಯಿರುತ್ತಾರೆ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕ್ಯಸರ್‌ವೇಟರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

9. ಜಂಗಲಿನಿಂದ ನಾಟೂಗಳನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ವಿರ್ಪಾಡುಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರಕಾರದವರು ರಸ್ತೆಯನ್ನಾಗಲಿ ಭಂಡಿದಾರಿಯನ್ನಾಗಲಿ ಮಾಡಿಸಿ ಕೊಡುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಈ ನೆಪದಿಂದ ನಾಟೂ ವಗೈರೆ ವಾಮಿದೆಯಲ್ಲಿ ತಾರದಿದ್ದರೆ ಈ ಕಾರಣವು ಅಂಗೀಕರಿಸಲ್ಪಡಲಾರದು.

10. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕ್ಯಸರ್‌ವೇಟರ ಆಫಿಸಿನಲ್ಲಿ ಕೇಳತಕ್ಕದ್ದು, ಮತ್ತು ಅಲ್ಲಿ ನೋಟಿಸ್ ಹಲಿಗೇ ಮೇಲೆ ಇಸ್ತಿಹಾರ್‌ನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ನಾರಾಯಣರಾವ್,
ಡೆ|| ಕ್ಯಸರ್‌ವೇಟರ್.